ರಾಯಚೂರು ವಿಶ್ವವಿದ್ಯಾಲಯ RAICHUR UNIVERSITY

ಯರಗೇರಾ584133, ರಾಯಚೂರು, ಕರ್ನಾಟಕ, ಭಾರತ

ಆಡಳಿತ ವಿಭಾಗ Email: registrarrur@gmail.com

ಸಂಖ್ಯೆ: ರಾವಿರಾ/ಆಡಳಿತ/ಸಿಂಡಿಕೇಟ್ ಸಭೆ/ ದಿನಾಂಕ: 09.03.2021

## ಸಿಂಡಿಕೇಟ್ ಸಭೆಯ ಸೂಚನಾ ಪತ್ರ

ವಿಷಯ: ದಿನಾಂಕ 10.03.2021ರಂದುಬೆಳಿಗ್ಗೆ 11:30 ಗಂಟೆಗೆ ಸಿಂಡಿಕೇಟ್ ಸಭೆಯನ್ನು ಜರುಗಿಸುವ ಕುರಿತು.

ಉಲ್ಲೇಖ: ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ: 09.03.2021.

*****

ಮಾನ್ಯ ಕುಲಪತಿಗಳ ನಿರ್ದೇಶನದ ಮೇರೆಗೆ ಸಿಂಡಿಕೇಟಿನ ಅಸಮಾನ್ಯ ಸಭೆಯನ್ನು ಬುಧವಾರ ದಿನಾಂಕ: 10.03.2021 ರಂದು ಬೆಳಿಗ್ಗೆ 11:30 ಗಂಟೆಗೆ ವಿಶ್ವವಿದ್ಯಾಲಯದ ಆಡಳಿತ ಕಚೇರಿಯಲ್ಲಿ ಕರೆಯಲಾಗಿದೆ. ಕಾರಣ, ತಾವು ಈ ಸಭೆಗೆ ಆಗಮಿಸಬೇಕಾಗಿ ಕೋರಲಾಗಿದೆ.

## ಸಭೆಯ ಕಾರ್ಯಸೂಚಿ

1. ದಿನಾಂಕ: 09.02.2021ರಂದು ಜರುಗಿದ ಸಿಂಡಿಕೇಟ್ ಸಭೆಯ ನಡುವಳಿಗಳನ್ನು ದೃಢೀಕರಿಸುವ ಕುರಿತು.
2. ರಾಯಚೂರು ವಿಶ್ವವಿದ್ಯಾಲಯದ 2021-22ನೇ ಸಾಲಿನ ಸ್ನಾತಕ/ಸ್ನಾತಕೋತ್ತರ ಕೋರ್ಸ್‌ಗಳ ಸಂಯೋಜನೆಯ ಶುಲ್ಕವನ್ನು ಅನುಮೋದಿಸುವ ವಿಷಯವನ್ನು ಪರಿಗಣಿಸುವ ಕುರಿತು.
3. ರಾಯಚೂರು ವಿಶ್ವವಿದ್ಯಾಲಯದ ಹಣಕಾಸು ಅಧಿಕಾರಗಳ ಹೆಸರಿನಲ್ಲಿ ಬ್ಯಾಂಕ್ ಖಾತೆಗಳನ್ನು ತೆಗೆಯುವ ವಿಷಯವನ್ನು ಪರಿಗಣಿಸುವ ಕುರಿತು.
4. ನೂತನ ರಾಯಚೂರು ವಿಶ್ವವಿದ್ಯಾಲಯಕ್ಕೆ ಹಣಕಾಸು ಅಧಿಕಾರಿಯನ್ನು ನೇಮಕ ಮಾಡುವ ವಿಷಯವನ್ನು ಪರಿಗಣಿಸುವ ಕುರಿತು.
5. ರಾಯಚೂರು ವಿಶ್ವವಿದ್ಯಾಲಯದಲ್ಲಿ ಅನುಪಯುಕ್ತ ಬ್ಯಾಟರಿಗಳು ಹಾಗೂ ಹಾನಿಗೊಳಗಾದ ಪೀಠೋಪಕರಣಗಳ ಹರಾಜು/ಮಾರಾಟ/ಮರುಬಳಕೆಯ ಬಗ್ಗೆ ನಿರ್ಣಯಿಸುವ ವಿಷಯವನ್ನು ಪರಿಗಣಿಸುವ ಕುರಿತು.
6. ನೂತನವಾಗಿ ಸ್ಥಾಪಿತಗೊಂಡ ರಾಯಚೂರು ವಿಶ್ವವಿದ್ಯಾಲಯದ ಲಾಂಛನ ವಿನ್ಯಾಸ ಮತ್ತು ಘೋಷವಾಕ್ಯ ಬಗ್ಗೆ ನಿರ್ಣಯಿಸುವ ವಿಷಯವನ್ನು ಪರಿಗಣಿಸುವ ಕುರಿತು.
7. ನೂತನವಾಗಿ ಸ್ಥಾಪಿತಗೊಂಡ ರಾಯಚೂರು ವಿಶ್ವವಿದ್ಯಾಲಯದ ವಿವಿಧ ವಿಭಾಗಗಳಿಗೆ ಅಂತರ್ಜಾಲದ ಬಗ್ಗೆ ಹಾಗೂ ವಿಶ್ವವಿದ್ಯಾಲಯದ ಅಧಿಕಾರಿಗಳಿಗೆ ಮೊಬೈಲ್ ಸಂಖ್ಯೆಗಳನ್ನು ಒದಗಿಸುವ ಬಗ್ಗೆ ನಿರ್ಣಯಿಸುವ ವಿಷಯವನ್ನು ಪರಿಗಣಿಸುವ ಕುರಿತು.
8. ನೂತನವಾಗಿ ಸ್ಥಾಪಿತಗೊಂಡ ರಾಯಚೂರು ವಿಶ್ವವಿದ್ಯಾಲಯದ ವಿವಿಧ ವಿಭಾಗಗಳಿಗೆ ಕಂಪ್ಯೂಟರ್, ಪ್ರಿಂಟರ್, ಜೆರಾಕ್ಸ್ ಮೆಷಿನ್, ಎಲೆಕ್ಟ್ರಾನಿಕ್ಸ್ ಉತ್ಪನ್ನಗಳು, ಇತ್ಯಾದಿ ಉಪಕರಣಗಳನ್ನು ಒದಗಿಸುವ ಬಗ್ಗೆ ನಿರ್ಣಯಿಸುವ ವಿಷಯವನ್ನು ಪರಿಗಣಿಸುವ ಕುರಿತು.

10/3/21

(ಪ್ರೊ. ವಿಶ್ವನಾಥ ಎಂ.)
ಕುಲಸಚಿವರು
ರಾಯಚೂರು ವಿಶ್ವವಿದ್ಯಾಲಯ,
ರಾಯಚೂರು

ಗೆ,

ಮಾನ್ಯ ಕುಲತಿಗಳು, ರಾಯಚೂರು ವಿಶ್ವವಿದ್ಯಾಲಯ, ರಾಯಚೂರು

**ರಾಯಚೂರು ವಿಶ್ವವಿದ್ಯಾಲಯ**

**ರಾಯಚೂರು ಯರಗೇರಾ-584 133, ಕರ್ನಾಟಕರಾಜ್ಯ, ಭಾರತ**

**ಆಡಳಿತ ವಿಭಾಗ** E-mail: registrarrur@gmail.com


ಕ್ರ.ಸಂ. ರಾವಿರಾ/ಸಿಂಡಿಕೇಟ್/ಸಾ.ಸಭೆ/2020-21/ ದಿನಾಂಕ: 12.03.2021

ಗೆ,

ಮಾನ್ಯ ಕುಲಪತಿಗಳು,
ರಾಯಚೂರು ವಿಶ್ವವಿದ್ಯಾಲಯ,
ಯರಗೇರಾ, ರಾಯಚೂರು-584133

ಮಾನ್ಯರೇ,

ವಿಷಯ: ದಿನಾಂಕ: 10.03.2021ರಂದು ಬೆಳಿಗ್ಗೆ 11.30ಗಂಟೆಗೆ ರಾಯಚೂರು ವಿಶ್ವವಿದ್ಯಾಲಯದ ಆಡಳಿತ ಕಚೇರಿಯಲ್ಲಿ ಜರುಗಿದ ಸಿಂಡಿಕೇಟ್ ಸಾಮಾನ್ಯಸಭೆಯನಡವಳಿಗಳನ್ನುಕಳುಹಿಸುವಕುರಿತು.

***

ದಿನಾಂಕ: 10.03.2021ರಂದು ಬೆಳಿಗ್ಗೆ 11.30 ಗಂಟೆಗೆ, ರಾಯಚೂರು ವಿಶ್ವವಿದ್ಯಾಲಯದ ಆಡಳಿತ ಕಚೇರಿಯಲ್ಲಿ ಜರುಗಿದ ಸಿಂಡಿಕೇಟ ಸಾಮಾನ್ಯ ಸಭೆಯ ನಡವಳಿಗಳನ್ನು ಈ ಪತ್ರದೊಂದಿಗೆ ಲಗತ್ತಿಸಿ ತಮ್ಮಗೆ ಕಳುಹಿಸಿಕೊಡಲಾಗಿದೆ.

ತಮ್ಮ ವಿಶ್ವಾಸಿ,

(ಪ್ರೊ. ವಿಶ್ವನಾಥ ಎಂ.,)
**ಕುಲಸಚಿವರು,**
**ರಾಯಚೂರು ವಿಶ್ವವಿದ್ಯಾಲಯ,**
**ರಾಯಚೂರು.**

ಅಡಕ: ಸಿಂಡಿಕೇಟ್ ನಡವಳಿಗಳು

ಪ್ರತಿಗಳು:

1. ಮಾನ್ಯ ರಾಜ್ಯಪಾಲರ ಪ್ರಧಾನ ಕಾರ್ಯದರ್ಶಿಗಳು, ರಾಜಭವನ, ಬೆಂಗಳೂರು-560 001.
2. ಮಾನ್ಯ ಪ್ರಧಾನ ಕಾರ್ಯದರ್ಶಿಗಳು, ಶಿಕ್ಷಣಇಲಾಖೆ (ವಿಶ್ವವಿದ್ಯಾಲಯಗಳು), ಕರ್ನಾಟಕ ಸರ್ಕಾರ, ಬಹುಮಹಡಿಗಳ ಕಟ್ಟಡ, ಬೆಂಗಳೂರು-560001
3. ಕುಲಸಚಿವರು (ಮೌಲ್ಯಮಾಪನ), ರಾಯಚೂರು ವಿಶ್ವವಿದ್ಯಾಲಯ, ರಾಯಚೂರು
4. ಹಣಕಾಸು ಅಧಿಕಾರಿಗಳು, ರಾಯಚೂರು ವಿಶ್ವವಿದ್ಯಾಲಯ, ರಾಯಚೂರು
5. ನಿರ್ದೇಶಕರು, ಕಾಲೇಜು ಅಭಿವೃದ್ಧಿ ಮಂಡಳಿ, ರಾಯಚೂರು ವಿಶ್ವವಿದ್ಯಾಲಯ, ರಾಯಚೂರು
6. ಉಪ ಗ್ರಂಥಪಾಲಕರು, ರಾಯಚೂರು ವಿಶ್ವವಿದ್ಯಾಲಯ, ರಾಯಚೂರು
7. ಉಪ ಕುಲಸಚಿವರು, ರಾಯಚೂರು ವಿಶ್ವವಿದ್ಯಾಲಯ, ರಾಯಚೂರು
8. ನೋಡಲ್ ಅಧಿಕಾರಿ, ಇ-ಗವರ್ನನ್ಸ್, ರಾಯಚೂರು ವಿಶ್ವವಿದ್ಯಾಲಯ, ರಾಯಚೂರು
9. ಕುಲಪತಿಗಳ ಆಪ್ತಕಾಯದರ್ಶಿ/ ಕುಲಪತಿಗಳ ಆಪ್ತಸಹಾಯಕ, ರಾಯಚೂರು ವಿಶ್ವವಿದ್ಯಾಲಯ, ರಾಯಚೂರು
10. ಕಚೇರಿ ಕಡತಕ್ಕೆ.

## ಸಿಂಡಿಕೇಟ್ ಸಭೆಯ ನಡವಳಿಗಳು

ದಿನಾಂಕ: 10.03.2021 ರಂದು ಬೆಳಿಗ್ಗೆ 11.30 ಗಂಟೆಗೆ ರಾಯಚೂರು ವಿಶ್ವವಿದ್ಯಾಲಯದ ಆಡಳಿತ ಕಚೇರಿಯಲ್ಲಿ ಜರುಗಿದ ಸಿಂಡಿಕೇಟ್ ಸಾಮಾನ್ಯ ಸಭೆಯ ನಡವಳಿಗಳು.

### ಸಭೆಯಲ್ಲಿ ಉಪಸ್ಥಿತರಿದ್ದ ಸದಸ್ಯರು

1) ಪ್ರೊ. ಹರೀಶ್ ರಾಮಸ್ವಾಮಿ, ಮಾನ್ಯ ಕುಲಪತಿಗಳು – ಅಧ್ಯಕ್ಷರು

2) ಪ್ರೊ. ವಿಶ್ವನಾಥ ಎಂ., ಕುಲಸಚಿವರು – ಸದಸ್ಯ ಕಾರ್ಯದರ್ಶಿಗಳು

ಮೊದಲನೇಯದಾಗಿ ಕುಲಸಚಿವರು ಸಭಾ ಅಧ್ಯಕ್ಷರಾದ ಮಾನ್ಯ ಕುಲಪತಿಗಳನ್ನು ಸ್ವಾಗತಿಸುತ್ತಾ ಸಭೆ ನಡೆಸಿಕೊಂಡು ಹೋಗಲು ಮಾನ್ಯ ಕುಲಪತಿಗಳಲ್ಲಿ ವಿನಂತಿಸುವದರೊಂದಿಗೆ ಸಭೆಯು ಪ್ರಾರಂಬವಾಯಿತು.

| ಕಲಂ/ ಐಟಂ ನಂ. | ವಿಷಯ | ಸಿಂಡಿಕೇಟ್ ನಿರ್ಣಯ |
|---|---|---|
| 1. | ದಿನಾಂಕ: 09.02.2021ರಂದು ಜರುಗಿದ ಸಿಂಡಿಕೇಟ್ ಸಭೆಯ ನಡುವಳಿಗಳನ್ನು ದೃಢೀಕರಿಸುವ ಕುರಿತು. | ದಿನಾಂಕ: 09.02.2021ರಂದು ಜರುಗಿದ ಸಿಂಡಿಕೇಟ್ ಸಭೆಯ ನಿರ್ಣಯದ ಎಲ್ಲಾ ನಡುವಳಿಗಳನ್ನು ಸಿಂಡಿಕೇಟ್ ದೃಢೀಕರಿಸಿತು. |
| 2. | ರಾಯಚೂರು ವಿಶ್ವವಿದ್ಯಾಲಯದ 2021–22ನೇ ಸಾಲಿನ ಸ್ನಾತಕ/ಸ್ನಾತಕೋತ್ತರ ಕೋರ್ಸ್‌ಗಳ ಸಂಯೋಜನೆಯ (Affiliation Fee) ಶುಲ್ಕವನ್ನು ಅನುಮೋದಿಸುವ ವಿಷಯವನ್ನು ಪರಿಗಣಿಸುವ ಕುರಿತು. | ಪ್ರಸ್ತಾವನೆಯಲ್ಲಿ ತಿಳಿಸಿದ ಎಲ್ಲಾ ಅಂಶಗಳನ್ನು ಕೂಲಂಕುಷವಾಗಿ ಚರ್ಚಿಸಲಾಗಿ, ನೂತನವಾಗಿ ಸ್ಥಾಪಿತವಾಗಿರುವ ರಾಯಚೂರು ವಿಶ್ವವಿದ್ಯಾಲಯವು ರಾಯಚೂರು ಹಾಗೂ ಯಾದಗಿರಿ ಜಿಲ್ಲೆಗಳಲ್ಲಿನ ಸುಮಾರು 224 ಮಹಾವಿದ್ಯಾಲಯಗಳಿಗೆ 2021–22ನೇ ಸಾಲಿನ ಸ್ನಾತಕ/ಸ್ನಾತಕೋತ್ತರ ಕೋರ್ಸಗಳ ಸಂಯೋಜನೆ (Affiliation) ಮಾಡಲು ಮತ್ತು ಸದರಿ ಸಂಯೋಜನೆಗೆ ಸಂಬಂಧಿಸಿದಂತೆ, ಸಂಯೋಜನಾ (Affiliation Fee) ಶುಲ್ಕವನ್ನು 2021–22ನೇ ಸಾಲಿನ ಗುಲ್ಬರ್ಗಾ ವಿಶ್ವವಿದ್ಯಾಲಯವು ತಯಾರಿಸಿರುವ ಶುಲ್ಕದಂತೆ ರಾಯಚೂರು ವಿಶ್ವವಿದ್ಯಾಲಯವು ಸಂಯೋಜನಾ (Affiliation Fee) ಶುಲ್ಕವನ್ನು (2021–22) ತಯಾರಿಸಿರುವ ವಿಷಯವನ್ನು ಸಿಂಡಿಕೇಟ್ ಅನುಮೋದಿಸಿತು. |
| 3. | ರಾಯಚೂರು ವಿಶ್ವವಿದ್ಯಾಲಯದ ಹಣಕಾಸು ಅಧಿಕಾರಗಳ ಹೆಸರಿನಲ್ಲಿ ಬ್ಯಾಂಕ್ ಖಾತೆಗಳನ್ನು ತೆಗೆಯುವ ವಿಷಯವನ್ನು ಪರಿಗಣಿಸುವ ಕುರಿತು. | ಪ್ರಸ್ತಾವನೆಯಲ್ಲಿ ತಿಳಿಸಿದ ಎಲ್ಲಾ ಅಂಶಗಳನ್ನು ಕೂಲಂಕುಷವಾಗಿ ಚರ್ಚಿಸಲಾಗಿ, ರಾಯಚೂರು ವಿಶ್ವವಿದ್ಯಾಲಯದಲ್ಲಿ ಹಣಕಾಸಿನ ಕಾರ್ಯನಿರ್ವಹಣೆಗೆ ಹಣಕಾಸು ಅಧಿಕಾರಿಗಳ ಹೆಸರಿನಲ್ಲಿ ಬ್ಯಾಂಕ್ ಖಾತೆಗಳನ್ನು ತೆರೆಯಲು ಹಾಗೂ ಟಿಪ್ಪಣಿಯಲ್ಲಿ ಉಲ್ಲೇಖಿಸಿರುವ ಕ್ರ.ಸಂ. 01 ರಿಂದ 08ರವರೆಗೆ ಭಾರತೀಯ ಸ್ಟೇಟ್ ಬ್ಯಾಂಕ್, ರಾಯಚೂರಿನಲ್ಲಿ ತೆಗೆಯುವ ಹಾಗೂ ಕ್ರ.ಸಂ. 09ರ ಬ್ಯಾಂಕ್ ಖಾತೆಗಳನ್ನು ಯುನಿಯನ್ ಬ್ಯಾಂಕ್, ರಾಯಚೂರಿನಲ್ಲಿ ತೆಗೆಯುವ ಪ್ರಸ್ತಾವನೆಗೆ ಸಿಂಡಿಕೇಟ್ ಅನುಮೋದಿಸಿತು. |
| 4. | ನೂತನ ರಾಯಚೂರು ವಿಶ್ವವಿದ್ಯಾಲಯಕ್ಕೆ ಹಣಕಾಸು ಅಧಿಕಾರಿಯನ್ನು ನೇಮಕ ಮಾಡುವ ವಿಷಯವನ್ನು ಪರಿಗಣಿಸುವ ಕುರಿತು. | ಪ್ರಸ್ತಾವನೆಯಲ್ಲಿ ತಿಳಿಸಿದ ಎಲ್ಲಾ ಅಂಶಗಳನ್ನು ಕೂಲಂಕುಷವಾಗಿ ಚರ್ಚಿಸಲಾಗಿ, ರಾಯಚೂರು ವಿಶ್ವವಿದ್ಯಾಲಯದ ಹಣಕಾಸಿನ ವಿಷಯಗಳನ್ನು ಸುಗಮವಾಗಿ ನಿಭಾಯಿಸುವಸಲುವಾಗಿ ಸ್ಥಳೀಯವಾಗಿ ಲಭ್ಯವಿರುವ ಒಬ್ಬ ಪ್ರಾಧ್ಯಾಪಕ/ ಅಧಿಕಾರಿಯವರನ್ನು ರಾಯಚೂರು ವಿಶ್ವವಿದ್ಯಾಲಯದ ಹಣಕಾಸು ಅಧಿಕಾರಿಯನ್ನಾಗಿ ಅಥವಾ ಸರ್ಕಾರದಿಂದ ಒಬ್ಬ ಪೂರ್ಣ ಪ್ರಮಾಣದ ಹಣಕಾಸು ಅಧಿಕಾರಿಯನ್ನು ನೇಮಿಸುವಂತೆ ಸರ್ಕಾರಕ್ಕೆ ಪತ್ರ ಬರೆಯಲು ಸಿಂಡಿಕೇಟ್ ಅನುಮೋದಿಸಿತು. |

...2

| | | |
|---|---|---|
| 5. | ರಾಯಚೂರು ವಿಶ್ವವಿದ್ಯಾಲಯದ ಕಛೇರಿಯ/ ವಿವಿಧ ವಿಭಾಗಗಳಲ್ಲಿ ದಿನನಿತ್ಯದ ಕೆಲಸ ಕಾರ್ಯಗಳಿಗೆ ಲೈಟ್, ಫ್ಯಾನ್, ಪ್ರಿಂಟರ್ ಹಾಗೂ ಕಂಪ್ಯೂಟರಗಳಿಗೆ UPS ಮತ್ತು Battery ಗಳನ್ನು ಅಳವಡಿಸುವ ಬಗ್ಗೆ ಹಾಗೂ ಅನುಪಯುಕ್ತ ಯುಪಿಎಸ್ ಬ್ಯಾಟರಿಗಳು ಹಾಗೂ ಹಾನಿಗೊಳಗಾದ ಪೀಠೋಪಕರಣಗಳ ಹರಾಜು/ ಮಾರಾಟ/ ಮರುಬಳಕೆಯ ಬಗ್ಗೆ ನಿರ್ಣಯಿಸುವ ವಿಷಯವನ್ನು ಪರಿಗಣಿಸುವ ಕುರಿತು. | ಪ್ರಸ್ತಾವನೆಯಲ್ಲಿ ತಿಳಿಸಿದ ಎಲ್ಲಾ ಅಂಶಗಳನ್ನು ಕೂಲಂಕುಷವಾಗಿ ಚರ್ಚಿಸಲಾಗಿ, ರಾಯಚೂರು ವಿಶ್ವವಿದ್ಯಾಲಯದ ಕಛೇರಿಯ/ ವಿವಿಧ ವಿಭಾಗಗಳಲ್ಲಿ ದಿನನಿತ್ಯದ ಕೆಲಸ ಕಾರ್ಯಗಳಿಗೆ ಲೈಟ್, ಫ್ಯಾನ್, ಪ್ರಿಂಟರ್ ಹಾಗೂ ಕಂಪ್ಯೂಟರಗಳಿಗೆ UPS ಮತ್ತು Battery ಗಳನ್ನು ಅಳವಡಿಸುವ ಕಾರ್ಯವಿಧಾನವನ್ನು ಅನುಸರಿಸುವ ಮೂಲಕ ಹಾಗೂ ಅನುಪಯುಕ್ತ ಯುಪಿಎಸ್ ಬ್ಯಾಟರಿಗಳು ಹಾಗೂ ಹಾನಿಗೊಳಗಾದ ಪೀಠೋಪಕರಣಗಳನ್ನು ಕಾರ್ಯವಿಧಾನವನ್ನು ಅನುಸರಿಸುವ ಮೂಲಕ ಹರಾಜು/ಮಾರಾಟ/ಮರುಬಳಕೆ ಮಾಡುವುದರ ಬಗ್ಗೆ ಸಿಂಡಿಕೇಟ್ ಅನುಮೋದಿಸಿತು. |
| 6. | ನೂತನವಾಗಿ ಸ್ಥಾಪಿತಗೊಂಡ ರಾಯಚೂರು ವಿಶ್ವವಿದ್ಯಾಲಯದ ಲಾಂಛನ ವಿನ್ಯಾಸ ಮತ್ತು ಘೋಷವಾಕ್ಯ ಬಗ್ಗೆ ನಿರ್ಣಯಿಸುವ ವಿಷಯವನ್ನು ಪರಿಗಣಿಸುವ ಕುರಿತು. | ಪ್ರಸ್ತಾವನೆಯಲ್ಲಿ ತಿಳಿಸಿದ ಎಲ್ಲಾ ಅಂಶಗಳನ್ನು ಕೂಲಂಕುಷವಾಗಿ ಚರ್ಚಿಸಲಾಗಿ, ಗುಲ್ಬರ್ಗಾ ವಿಶ್ವವಿದ್ಯಾಲಯದಿಂದ ವಿಭಜನೆಗೊಂಡು ನೂತನವಾಗಿ ಸ್ಥಾಪಿತಗೊಂಡ ರಾಯಚೂರು ವಿಶ್ವವಿದ್ಯಾಲಯಕ್ಕೆ ಲಾಂಛನ ವಿನ್ಯಾಸ ಮತ್ತು ಘೋಷವಾಕ್ಯದ ಬಗ್ಗೆ ಹಾಗೂ ಸರ್ಕಾರದಿಂದ ಅನುಮೋದನೆಯ ಬಗ್ಗೆ ಸರ್ಕಾರಕ್ಕೆ ಪತ್ರ ಬರೆಯಲು ಸಿಂಡಿಕೇಟ್ ಅನುಮೋದಿಸಿತು. |
| 7. | ನೂತನವಾಗಿ ಸ್ಥಾಪಿತಗೊಂಡ ರಾಯಚೂರು ವಿಶ್ವವಿದ್ಯಾಲಯದ ವಿವಿಧ ವಿಭಾಗಗಳಿಗೆ ಅಂತರ್ಜಾಲದ ಬಗ್ಗೆ ಹಾಗೂ ವಿಶ್ವವಿದ್ಯಾಲಯದ ಅಧಿಕಾರಿಗಳಿಗೆ ಮೊಬೈಲ್ ಸಂಖ್ಯೆಗಳನ್ನು ಒದಗಿಸುವ ಬಗ್ಗೆ ನಿರ್ಣಯಿಸುವ ಕುರಿತು. | ಪ್ರಸ್ತಾವನೆಯಲ್ಲಿ ತಿಳಿಸಿದ ಎಲ್ಲಾ ಅಂಶಗಳನ್ನು ಕೂಲಂಕುಷವಾಗಿ ಚರ್ಚಿಸಲಾಗಿ, ನೂತನವಾಗಿ ಸ್ಥಾಪಿತಗೊಂಡ ರಾಯಚೂರು ವಿಶ್ವವಿದ್ಯಾಲಯದ ವಿವಿಧ ವಿಭಾಗಗಳಿಗೆ ಅತ್ಯವಶ್ಯಕವಾಗಿ ಅಂತರ್ಜಾಲದ ಸಂಪರ್ಕದ ಕಾರ್ಯವಿಧಾನವನ್ನು ಅನುಸರಿಸುವ ಮೂಲಕ ಹಾಗೂ ವಿಶ್ವವಿದ್ಯಾಲಯದ ಅಧಿಕಾರಿಗಳಿಗೆ ಮೊಬೈಲ್ ಸಂಖ್ಯೆಗಳನ್ನು ಒದಗಿಸುವ ಬಗ್ಗೆ ಸಿಂಡಿಕೇಟ್ ಅನುಮೋದಿಸಿತು. |
| 8. | ನೂತನವಾಗಿ ಸ್ಥಾಪಿತಗೊಂಡ ರಾಯಚೂರು ವಿಶ್ವವಿದ್ಯಾಲಯದ ವಿವಿಧ ವಿಭಾಗಗಳಿಗೆ ಕಂಪ್ಯೂಟರ್, ಪ್ರಿಂಟರ್, ಜಿರಾಕ್ಸ್ ಮೆಷಿನ್, ಎಲೆಕ್ಟ್ರಾನಿಕ್ಸ್ ಉತ್ಪನ್ನಗಳು, ಇತ್ಯಾದಿ ಉಪಕರಣಗಳನ್ನು ಒದಗಿಸುವ ಬಗ್ಗೆ ನಿರ್ಣಯಿಸುವ ಕುರಿತು. | ಪ್ರಸ್ತಾವನೆಯಲ್ಲಿ ತಿಳಿಸಿದ ಎಲ್ಲಾ ಅಂಶಗಳನ್ನು ಕೂಲಂಕುಷವಾಗಿ ಚರ್ಚಿಸಲಾಗಿ, ನೂತನವಾಗಿ ಸ್ಥಾಪಿತಗೊಂಡ ರಾಯಚೂರು ವಿಶ್ವವಿದ್ಯಾಲಯದ ವಿವಿಧ ವಿಭಾಗಗಳಿಗೆ ಅತ್ಯವಶ್ಯಕವಾಗಿ ಕಂಪ್ಯೂಟರ್, ಪ್ರಿಂಟರ್, ಜಿರಾಕ್ಸ್ ಮೆಷಿನ್, ಎಲೆಕ್ಟ್ರಾನಿಕ್ಸ್ ಉತ್ಪನ್ನಗಳು, ಇತ್ಯಾದಿ ಉಪಕರಣಗಳನ್ನು ಕಾರ್ಯವಿಧಾನವನ್ನು ಅನುಸರಿಸುವ ಮೂಲಕ ಖರೀದಿಸಲು ಸಿಂಡಿಕೇಟ್ ಅನುಮೋದಿಸಿತು. |

10-3-2021.

ಕುಲಸಚಿವರು/ಸದಸ್ಯ ಕಾರ್ಯದರ್ಶಿಗಳು
ರಾಯಚೂರು ವಿಶ್ವವಿದ್ಯಾಲಯ,
ರಾಯಚೂರು

ಕುಲಪತಿಗಳು/ಅಧ್ಯಕ್ಷರು
ರಾಯಚೂರು ವಿಶ್ವವಿದ್ಯಾಲಯ,
ರಾಯಚೂರು